# ಕನ್ನಡ ವಿಶ್ವವಿದ್ಯಾಲಯ, ಹಂಪಿ

## ಅಭಿವೃದ್ಧಿ ಅಧ್ಯಯನ ವಿಭಾಗ

ಹಾಗೂ

## ಅಬ್ದುಲ್ ನಜೀರ್‌ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಮೈಸೂರು

ಇವರ ಸಹಯೋಗದೊಂದಿಗೆ

## ಮಕ್ಕಳ ಸ್ನೇಹಿ ಗ್ರಂಥಾಲಯ ತರಬೇತಿದಾರರ ತರಬೇತಿ ಕಾರ್ಯಾಗಾರ

**ದಿನಾಂಕ – 26.6.2023**

### ಡಿಜಿಟಲ್ ಡಿವೈಡ್ ನಿವಾರಣೆಯೇ ಗ್ರಂಥಾಲಯಗಳ ಮುಖ್ಯ ಆಶಯವಾಗಿರಲಿ : ಡಾ. ಗಣೇಶ್ ಪ್ರಸಾದ್

ಮುಂದಿನ ಪೀಳಿಗೆಯಲ್ಲಿ ಡಿಜಿಟಲ್ ಡಿವೈಡ್ ಅಂತರವನ್ನು ಕಡಿಮೆ ಮಾಡುವುದು ಗ್ರಾಮೀಣ ಪ್ರದೇಶಗಳಲ್ಲಿನ ಗ್ರಂಥಾಲಯಗಳ ಮುಖ್ಯ ಆಶಯವಾಗಬೇಕು ಎಂದು ಅಬ್ದುಲ್ ನಜೀರ್‌ಸಾಬ್ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯ ಪ್ರಾಧ್ಯಾಪಕರಾದ **ಡಾ. ಗಣೇಶ್ ಪ್ರಸಾದ್ ಅವರು** ಅಭಿಪ್ರಾಯಪಟ್ಟರು.




ಕನ್ನಡ ವಿಶ್ವವಿದ್ಯಾಲಯದ ರಾಜಕುಮಾರ ಸಭಾಂಗಣದಲ್ಲಿ **ಅಭಿವೃದ್ಧಿ ಅಧ್ಯಯನ ವಿಭಾಗ** ಮತ್ತು **ಅಬ್ದುಲ್ ನಜೀರ್ ಸಾಬ್ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯ** ಸಹಯೋಗದಲ್ಲಿ ಆಯೋಜಿಸಿದ್ದ **ಮಕ್ಕಳ ಸ್ನೇಹಿ ಗ್ರಂಥಾಲಯ ತರಬೇತಿದಾರರ ತರಬೇತಿ ಕಾರ್ಯಾಗಾರವನ್ನು** ಉದ್ದೇಶಿಸಿ ಮಾತನಾಡಿದರು.

ಮುಂದಿನ ದಿನಗಳಲ್ಲಿ ಈಗಿರುವ ಗ್ರಂಥಾಲಯಗಳನ್ನು ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರಗಳಾಗಿ ಅಭಿವೃದ್ಧಿಪಡಿಸುವುದು. ಗ್ರಾಮ ಪಂಚಾಯತಿಗಳ ಮೂಲಕ ಮೂಲ ಸೌಕರ್ಯಗಳನ್ನು ಒದಗಿಸುವುದು. ಉಪಗ್ರಹ ವ್ಯವಸ್ಥೆ ಮೂಲಕ ಪ್ರಚಲಿತ ವಿದ್ಯಮಾನಗಳ ಬಗ್ಗೆ ಮಾಹಿತಿ ನೀಡುವುದರ ಮೂಲಕ ಗ್ರಾಮೀಣ ಪ್ರದೇಶಗಳ ಮಕ್ಕಳು ನಗರ ಪ್ರದೇಶದ ಮಕ್ಕಳಿಗೆ ಸ್ಪರ್ಧೆ ನೀಡುವಂತೆ ಮಾಡಬೇಕು. ಈ ಸೌಕರ್ಯಗಳ ಫಲಶೃತಿಯು ಮುಂದಿನ ಐದು ವರ್ಷಗಳಲ್ಲಿ ಪಡೆಯಬಹುದು ಎಂದರು.

ಕನ್ನಡ ವಿಶ್ವವಿದ್ಯಾಲಯದ ಅಭಿವೃದ್ಧಿ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ **ಡಾ. ಹೆಚ್.ಡಿ. ಪ್ರಶಾಂತ ಅವರು** ಪ್ರಾಸ್ತಾವಿಕವಾಗಿ ಮಾತನಾಡುತ್ತಾ ಓದುವುದು ಮತ್ತು ಕೇಳಿಸಿಕೊಳ್ಳುವುದು ಕಲಿಕೆಯನ್ನು ಒಳಗು ಮಾಡಿಕೊಳ್ಳುವ ಪ್ರಕ್ರಿಯೆ. ನವ ಮಾಧ್ಯಮಗಳ ಯುಗದಲ್ಲಿ ಮಕ್ಕಳಲ್ಲಿ ಕಲಿಯುವ ಮತ್ತು ಓದುವ ಆಸಕ್ತಿಯನ್ನು ಬೆಳೆಸುವುದು ಇಂದಿನ ತುರ್ತು ಅಗತ್ಯವಾಗಿದೆ ಎಂದು ತಿಳಿಸಿದರು.

ಈ ಕಾರ್ಯಕ್ರಮವನ್ನು ಸಂಶೋಧನಾರ್ಥಿ ದೊಡ್ಡ ಬಸಪ್ಪ ನಿರೂಪಿಸಿದರು. ಅಭಿವೃದ್ಧಿ ಅಧ್ಯಯನ ವಿಭಾಗದ ಮುಖ್ಯಸ್ಥರಾದ ಡಾ.ಗೀತಮ್ಮ ಕೆ. ಅವರು ವಂದಿಸಿದರು. ಸಂಗೀತ ವಿಭಾಗದ ವಿದ್ಯಾರ್ಥಿ ರವಿವರ್ಮ ಪ್ರಾರ್ಥನೆ ಗೀತೆ ಹಾಡಿದರು.

ಈ ಸಂದರ್ಭದಲ್ಲಿ ಕಾರ್ಯಕ್ರಮದ ಸಂಯೋಜನಾಧಿಕಾರಿಗಳಾದ ಸೌಮ್ಯ ಮತ್ತು ದೀಪಾ ಮತ್ತು ವಿವಿಧ ಭಾಗಗಳಿಂದ ಬಂದ ಗ್ರಂಥಪಾಲಕರು, ಸಿಬ್ಬಂದಿಗಳು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.






ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩ ೨೭೬

ANSSIRD&PR
ಅಬ್ದುಲ್ ನಜೀರ್‌ಸಾಬ್
ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ
ಮೈಸೂರು

## ಮಕ್ಕಳ ಸ್ನೇಹಿ ಗ್ರಂಥಾಲಯ ತರಬೇತಿದಾರರ ತರಬೇತಿ ಕಾರ್ಯಾಗಾರ

ಉದ್ಘಾಟನೆ ಹಾಗೂ ಅಧ್ಯಕ್ಷತೆ
**ಡಾ. ಡಿ.ವಿ. ಪರಮಶಿವಮೂರ್ತಿ**
ಮಾನ್ಯ ಕುಲಪತಿಗಳು
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಮುಖ್ಯ ಅತಿಥಿಗಳು
**ಡಾ. ಜಿ.ಎಸ್. ಗಣೇಶ್ ಪ್ರಸಾದ್**
ಪ್ರಾಧ್ಯಾಪಕರು
ಅಬ್ದುಲ್ ನಜೀರ್‌ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ

ಜೂನ್ ೨೬ ರಿಂದ ಜೂನ್ ೨೮, ೨೦೨೩ ರವರೆಗೆ
ಸಮಯ : ಬೆಳಿಗ್ಗೆ ೯.೩೦ ಗಂಟೆಗೆ
ಸ್ಥಳ : ರಾಜಕುಮಾರ ಸಭಾಂಗಣ ಮಂಟಪ, ವಿದ್ಯಾರಣ್ಯ

### ಪ್ರೀತಿಯ ಸ್ವಾಗತ

**ಡಾ. ಎ. ಸುಬ್ಬಣ್ಣ ರೈ**
ಕುಲಸಚಿವರು
ಕನ್ನಡ ವಿಶ್ವವಿದ್ಯಾಲಯ, ಹಂಪಿ

**ಶ್ರೀಮತಿ ನಾಹೀದ್ ಅಂಜುಮ್**
ಉಪನಿರ್ದೇಶಕರು
ಅ.ನ.ರಾ.ಗ್ರಾ.ಸಂ.

**ಡಾ. ಕೆ. ಗೀತಮ್ಮ**
ಸಹಾಯಕ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು
ಅಭಿವೃದ್ಧಿ ಅಧ್ಯಯನ ವಿಭಾಗ

**ಡಾ. ಹೆಚ್.ಡಿ. ಪ್ರಶಾಂತ್**
ಕಾರ್ಯಾಗಾರದ ಸಂಚಾಲಕರು
ಪ್ರಾಧ್ಯಾಪಕರು, ಅಭಿವೃದ್ಧಿ ಅಧ್ಯಯನ ವಿಭಾಗ

# ಮಕ್ಕಳ ಸ್ನೇಹಿ ಗ್ರಂಥಾಲಯ ತರಬೇತಿ



**ಮಕ್ಕಳ ಸ್ನೇಹಿ ಗ್ರಂಥಾಲಯ ತರಬೇತಿದಾರರ ಕಾರ್ಯಾಗಾರದಲ್ಲಿ ಪ್ರಾಧ್ಯಾಪಕ ಡಾ. ಗಣೇಶ್ ಪ್ರಸಾದ್ ಮಾತನಾಡಿದರು.**

**ಹೊಸಪೇಟೆ:** ಮುಂದಿನ ಪೀಳಿಗೆಯಲ್ಲಿ ಡಿಜಿಟಲ್ ಡಿವೈಡ್ ಅಂತರವನ್ನು ಕಡಿಮೆ ಮಾಡುವುದು ಗ್ರಾಮೀಣ ಪ್ರದೇಶಗಳಲ್ಲಿನ ಗ್ರಂಥಾಲಯಗಳ ಮುಖ್ಯ ಆಶಯವಾಗಬೇಕು ಎಂದು ಅಬ್ದುಲ್ ನಜೀರ್‌ಸಾಬ್ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯ ಪ್ರಾಧ್ಯಾಪಕ ಡಾ. ಗಣೇಶ್ ಪ್ರಸಾದ್ ಹೇಳಿದರು. ಕನ್ನಡ ವಿಶ್ವವಿದ್ಯಾಲಯದ ರಾಜಕುಮಾರ ಸಭಾಂಗಣದಲ್ಲಿ ಅಭಿವೃದ್ಧಿ ಅಧ್ಯಯನ ವಿಭಾಗ ಮತ್ತು ಅಬ್ದುಲ್ ನಜೀರ್ ಸಾಬ್ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯ ಸಹಯೋಗದಲ್ಲಿ ಆಯೋಜಿಸಿದ್ದ ಮಕ್ಕಳ ಸ್ನೇಹಿ ಗ್ರಂಥಾಲಯ ತರಬೇತಿದಾರರ ತರಬೇತಿ ಕಾರ್ಯಾಗಾರದಲ್ಲಿ ಮಾತನಾಡಿದರು. ಕನ್ನಡ ವಿಶ್ವವಿದ್ಯಾಲಯದ ಅಭಿವೃದ್ಧಿ ಅಧ್ಯಯನ ವಿಭಾಗದ ಪ್ರಾಧ್ಯಾಪಕ ಡಾ.ಹೆಚ್.ಡಿ. ಪ್ರಶಾಂತ ಮಾತನಾಡಿದರು.

ಸಂಶೋಧನಾರ್ಥಿ ದೊಡ್ಡ ಬಸಪ್ಪ ನಿರೂಪಿಸಿದರು. ಅಭಿವೃದ್ಧಿ ಅಧ್ಯಯನ ವಿಭಾಗದ ಮುಖ್ಯಸ್ಥರಾದ ಡಾ. ಗೀತಮ್ಮ ಕೆ. ಅವರು ವಂದಿಸಿದರು. ಸಂಗೀತ ವಿಭಾಗದ ವಿದ್ಯಾರ್ಥಿ ರವಿವರ್ಮ ಪ್ರಾರ್ಥನೆ ಗೀತೆ ಹಾಡಿದರು.

ಕಾರ್ಯಕ್ರಮದ ಸಂಯೋಜನಾಧಿಕಾರಿಗಳಾದ ಸೌಮ್ಯ ಮತ್ತು ದೀಪಾ ಮತ್ತು ವಿವಿಧ ಭಾಗಗಳಿಂದ ಬಂದ ಗ್ರಂಥಪಾಲಕರು, ಸಿಬ್ಬಂದಿಗಳು ವಿದ್ಯಾರ್ಥಿಗಳು ಇದ್ದರು.

# 'ಡಿಜಿಟಲ್ ಅಂತರ ಕಡಿಮೆ ಮಾಡಿ'

## ಮಕ್ಕಳ ಸ್ನೇಹಿ ಗ್ರಂಥಾಲಯ ತರಬೇತಿ ಕಾರ್ಯಾಗಾರ

**ವಿಕ ಸುದ್ದಿಲೋಕ** ವಿಜಯನಗರ (ಹೊಸಪೇಟೆ)

ಮುಂದಿನ ಪೀಳಿಗೆಯಲ್ಲಿ ಡಿಜಿಟಲ್ ಅಂತರ ಕಡಿಮೆ ಮಾಡುವುದು ಗ್ರಾಮೀಣ ಪ್ರದೇಶಗಳಲ್ಲಿನ ಗ್ರಂಥಾಲಯಗಳ ಮುಖ್ಯ ಆಶಯವಾಗಬೇಕು ಎಂದು ಅಬ್ದುಲ್ ನಜೀರ್‌ಸಾಬ್ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯ ಪ್ರಾಧ್ಯಾಪಕ ಡಾ.ಗಣೇಶ್ ಪ್ರಸಾದ್ ಹೇಳಿದರು. ಹಂಪಿ ಕನ್ನಡ ವಿವಿಯ ಅಭಿವೃದ್ಧಿ ಅಧ್ಯಯನ ವಿಭಾಗ ಮತ್ತು ಅಬ್ದುಲ್ ನಜೀರ್ ಸಾಬ್ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯಿಂದ ರಾಜಕುಮಾರ ಸಭಾಂಗಣದಲ್ಲಿ ಮಕ್ಕಳ ಸ್ನೇಹಿ ಗ್ರಂಥಾಲಯ ತರಬೇತಿದಾರರ ಕಾರ್ಯಾಗಾರದಲ್ಲಿ ಮಾತನಾಡಿ, ಈಗಿರುವ ಗ್ರಂಥಾಲಯಗಳನ್ನು ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರಗಳಾಗಿ ಅಭಿವೃದ್ಧಿಪಡಿಸುವುದು, ಗ್ರಾಮ ಪಂಚಾಯಿತಿ ಮೂಲಕ ಮೂಲ ಸೌಕರ್ಯ ಒದಗಿಸುವುದು, ಉಪಗ್ರಹ ವ್ಯವಸ್ಥೆಮೂಲಕ ಪ್ರಚಲಿತ ವಿದ್ಯಮಾನಗಳ ಬಗ್ಗೆ ಮಾಹಿತಿ ನೀಡುವುದರ ಮೂಲಕ ಗ್ರಾಮೀಣ ಪ್ರದೇಶಗಳ ಮಕ್ಕಳು ನಗರ ಪ್ರದೇಶದ ಮಕ್ಕಳಿಗೆ ಸ್ಪರ್ಧೆ ನೀಡುವಂತೆ ಮಾಡಬೇಕು ಎಂದರು. ಅಭಿವೃದ್ಧಿ ಅಧ್ಯಯನ ವಿಭಾಗದ ಪ್ರಾಧ್ಯಾಪಕ ಡಾ.ಎಚ್.ಡಿ. ಪ್ರಶಾಂತ ಪ್ರಾಸ್ತಾವಿಕ ಮಾತನಾಡಿ, ಓದುವುದು ಮತ್ತು ಕೇಳಿಸಿಕೊಳ್ಳುವುದು ಕಲಿಕೆಯನ್ನು ಒಳಗು ಮಾಡಿಕೊಳ್ಳುವ ಪ್ರಕ್ರಿಯೆ. ನವ ಮಾಧ್ಯಮಗಳ ಯುಗದಲ್ಲಿ ಮಕ್ಕಳಲ್ಲಿ ಕಲಿಯುವ ಮತ್ತು ಓದುವ ಆಸಕ್ತಿ ಬೆಳೆಸುವುದು ಅಗತ್ಯ ಎಂದರು.

ಅಭಿವೃದ್ಧಿ ಅಧ್ಯಯನ ವಿಭಾಗದ ಮುಖ್ಯಸ್ಥೆ ಡಾ.ಗೀತಮ್ಮ, ಸಂಶೋಧನಾರ್ಥಿ ದೊಡ್ಡ ಬಸಪ್ಪ ರವಿವರ್ಮ ಇದ್ದರು.



ಹಂಪಿ ಕನ್ನಡ ವಿವಿಯಲ್ಲಿ ಮಕ್ಕಳ ಸ್ನೇಹಿ ಗ್ರಂಥಾಲಯ ತರಬೇತಿದಾರರ ಕಾರ್ಯಾಗಾರ ನಡೆಯಿತು.

